ವಸತಿ ಶಾಲೆಗಳ ಸೌಲಭ್ಯ

111 (1364): ಡಾ॥ ಸುಧಾಕರ್. ಕೆ (ಚಿಕ್ಕಬಳ್ಳಾಪುರ)

ಅ) ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಎಷ್ಟು ವಿಧದ ವಸತಿ ಶಾಲೆಗಳು ರಾಜ್ಯದಲ್ಲಿವೆ; ಇದರ ನಿರ್ವಹಣೆ ಹೇಗೆ ಆಗುತ್ತಿದೆ;

ಆ) ಪ್ರಸ್ತುತ ಸರ್ಕಾರದ ಅವಧಿಯಲ್ಲಿ ಎಷ್ಟು ವಸತಿ ಶಾಲೆ ನಿರ್ಮಾಣಗೊಂಡಿವೆ; ಹೊಸ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ;

ಇ) ಕೇಂದ್ರ ಸರ್ಕಾರದ ಅನುದಾನ ಏನಾದರೂ ಈ ವಸತಿ ಶಾಲೆಗಳಿಗೆ ಸಿಗುತ್ತಿದೆಯೇ; ಬೇರೆ ಯಾವುದೇ ಯೋಜನೆಗಳ ಮೂಲಕ ಇದಕ್ಕೆ ಸಹಕಾರ ದೊರೆಯುತ್ತಿದೆಯೇ;

ಈ) ವಸತಿ ಶಾಲೆಗಳಲ್ಲಿ ಹಿಂದುಳಿದ ವರ್ಗದ ವಸತಿ ನಿಲಯಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ವಸತಿ ಶಾಲೆಗಳು, ವಸತಿ ನಿಲಯಗಳ ಸೌಲಭ್ಯ ವಿಸ್ತರಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ; ಹಾಗಿದ್ದರೆ ಕೈಗೊಂಡ ಕ್ರಮ ಏನು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ 02 ವಿಧದ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ.

1) 01 ರಿಂದ 05ನೇ ತರಗತಿಯವರಗೂ ನಡೆಸಲಾಗುತ್ತಿರುವ ವಸತಿ ಶಾಲೆ/ಆಶ್ರಮ ಶಾಲೆ. ಈ ವಸತಿ ಶಾಲೆಗಳ ನಿರ್ವಹಣೆಯನ್ನು ಜಿಲ್ಲಾ ಪಂಚಾಯತ ಕಾರ್ಯಕ್ರಮಗಳಡಿಯಲ್ಲಿ ಲಿಂಕ್ಡ್ ಡಾಕ್ಯೂಮೆಂಟ್ಸ್‌ನಲ್ಲಿ ಅನುದಾನ ಒದಗಿಸಿಕೊಂಡು ನಿರ್ವಹಣೆ ಮಾಡಲಾಗುತ್ತಿದೆ.

2) 06 ರಿಂದ 10ನೇ ತರಗತಿಯವರೆಗೂ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ/ ಕಿತ್ತೂರ ರಾಣಿ ಚೆನ್ನಮ್ಮ/ಅಟಲ್ ಬಿಹಾರಿ ವಾಜಪೇಯ/ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ವಹಣೆಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಮುಖಾಂತರ ರಾಜ್ಯ ವಲಯದಲ್ಲಿ ಒದಗಿಸಿರುವ ಅನುದಾನದಿಂದ ನೇರ ನಿರ್ವಹಣೆಯಲ್ಲಿ ನಡೆಸಲಾಗುತ್ತಿದೆ.

ಆ) ಪ್ರಸ್ತುತ ಸರ್ಕಾರದ ಅವಧಿಯಲ್ಲಿ 58 ವಸತಿ ಶಾಲಾ ಸಂಕೀರ್ಣಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಹೊಸ ಪ್ರಸ್ತಾವನೆಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ಇ) ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ವಹಣೆಗೆ ಮಾತ್ರ ಶೇ:100ರಷ್ಟು ಅನುದಾನ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದೆ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಡಾ॥ ಸುಧಾಕರ್ .ಕೆ: ಮಾನ್ಯ ಅಧ್ಯಕ್ಷರೆ, ಹಿಂದುಳಿದ ಸಮಾಜಕ್ಕೆ ವಿಶೇಷವಾಗಿ ಹೊಸ ವಸತಿ ಶಾಲೆಗಳನ್ನು ಪ್ರತಿ ತಾಲ್ಲೂಕುವಾರು ಆರಂಭ ಮಾಡಲು ಏನು ಕ್ರಮವನ್ನು ಸರ್ಕಾರ ತೆಗೆದುಕೊಂಡಿದೆ?

ಶ್ರೀ ಹೆಚ್. ಆಂಜನೇಯ: ಕೇಳಿರುವ ಪ್ರಶ್ನೆಗೆ ಎಲ್ಲಾ ಉತ್ತರವನ್ನು ಒದಗಿಸಿದ್ದೇವೆ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವ ಎಷ್ಟು ವಿಧದ ವಸತಿ ಶಾಲೆಗಳು ರಾಜ್ಯದಲ್ಲಿವೆ, ಇದರ ನಿರ್ವಹಣೆ ಹೇಗೆ ಆಗುತ್ತಿದೆ? ಪ್ರಸ್ತುತ ಸರ್ಕಾರದ ಅವಧಿಯಲ್ಲಿ ಎಷ್ಟು ವಸತಿ ಶಾಲೆ ನಿರ್ಮಾಣಗೊಂಡಿವೆ? ಹೊಸ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದೀರಾ, ಇನ್ನು ನೂರು ವಸತಿ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ರೀತಿ ಸಿದ್ದತೆಯನ್ನು ಮಾಡಿಕೊಳ್ಳುತ್ತೇವೆ. ಈ ತಿಂಗಳ ಅಂತ್ಯದಲ್ಲಿ ನೂರು ವಸತಿ ಶಾಲೆಗಳನ್ನು, ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಅಟಲ್

ಬಿಹಾರಿ ವಾಜಪೇಯಿ ಮತ್ತಿತರ ಇನ್ನು ನೂರು ವಸತಿ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಎಲ್ಲಾ ಪ್ರಸ್ತಾವನೆ ಸರ್ಕಾರದ ಮುಂದಿದೆ. ಜನವರಿಯಲ್ಲಿ ಎಲ್ಲೆಲ್ಲಿ ಪ್ರಾರಂಭಿಸುತ್ತೇವೆನ್ನುವುದನ್ನು ಪ್ರಕಟಪಡಿಸುತ್ತೇವೆ.

ಡಾ॥ ಸುಧಾಕರ್ .ಕೆ; ಅನೇಕ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳಷ್ಟು ಕಂಡು ಬಂದಿದೆ.

ಅಧ್ಯಕ್ಷರು: ಸುಧಾಕರ್, ಆಗಲ್ಲ, ನಿಮಗೆ ನಿರ್ದಿಷ್ಟವಾದ ಯಾವುದಾದರೂ ಶಾಲೆ ಗೊತ್ತಿದ್ದರೆ ಕೇಳಿ.

ಡಾ॥ ಸುಧಾಕರ .ಕೆ: ಈಗ ನಮ್ಮ ಕ್ಷೇತ್ರದಲ್ಲಿ ಅಂಘಟ್ಟ ಎನ್ನುವ ಶಾಲೆ ಮಂಜೂರಾಗಿ ಎರಡು ವರ್ಷವಾಗಿದೆ. ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ. ಅನೇಕ ಸಾರಿ ನಿಮ್ಮ ಅಧಿಕಾರಿಗಳೊಡನೆ ಮಾತನಾಡಿ ಸಭೆಗಳನ್ನು ಕರೆದಿದ್ದೇನೆ, ಇದಕ್ಕೆ ಸ್ಪಷ್ಟವಾದ ಕಾರಣ ಕೊಡಿ.

ಶ್ರೀ ಹೆಚ್. ಆಂಜನೇಯ: ಸುಮಾರು 10 ವರ್ಷಗಳಿಂದ ಶಾಲೆಗಳು ಸ್ವಂತಕಟ್ಟಡಗಳಿಲ್ಲದೆ ಬಾಡಿಗೆ ಕಟ್ಟಡದಲ್ಲಿವೆ, ಸ್ವಂತ ಕಟ್ಟಡ ಕಟ್ಟುವುದಕ್ಕೆ ಅದಕ್ಕೆ ಬೇಕಾಗಿರುವ ಹಣಕಾಸನ್ನೂ ಕೂಡ ಒದಗಿಸಿ, ಮತ್ತು ಅಲ್ಲಿ ಇಂಜಿನಿಯರಿಂಗ್ ಶಾಖೆಯನ್ನೂ ಕೂಡ ಬಲಗೊಳಿಸಿ, ಎಲ್ಲೆಲ್ಲಿ ಸ್ವಂತ ಜಾಗವನ್ನು ಪಡೆದು ಸ್ವಂತ ಕಟ್ಟಡವನ್ನು ಮಾಡುವುದಕ್ಕೆ ಸಾಧ್ಯವಿದೆಯೋ ಆ ಎಲ್ಲಾ ಕಡೆ ಸ್ವಂತ ಕಟ್ಟಡವನ್ನು ಕಟ್ಟುವುದಕ್ಕೆ ಎಲ್ಲಾ ಕ್ರಮಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. ಹಾಗೂ ಶಾಲೆಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳುತ್ತಿದೆ.

ಅಧ್ಯಕ್ಷರು: ಮಾನ್ಯ ಸುಧಾಕರ್‌ರವರೇ, ನಿಮ್ಮ ಪ್ರಶ್ನೆ ಒಂದು ರೀತಿ ಜನರಲ್ ಆಗಿದೆ. ನೀವು ಉಪ ಪ್ರಶ್ನೆ ಕೇಳಿರುವುದು ಒಂದು ಕಟ್ಟಡದ ವಿಚಾರದಲ್ಲಿ. ಅಂತಹ ಸಮಸ್ಯೆಗಳು ಇದ್ದರೆ ಪ್ರತ್ಯೇಕವಾಗಿ ಅವುಗಳ ಬಗ್ಗೆ ಪ್ರಶ್ನೆ ಕೇಳಬೇಕು. ಆಗ ಅವುಗಳಿಗೆ ಉತ್ತರ ಸಿಗುತ್ತದೆ. ನೀವು ಇಡೀ ರಾಜ್ಯದ ಪ್ರಶ್ನೆ ಕೇಳಿದರೆ ಅವರು ಎಲ್ಲಿ ಹೇಳುತ್ತಾರೆ? ಯಾವುದೋ ಒಂದು ತಾಲ್ಲೂಕಿನ ಬಗ್ಗೆ

ಕೇಳಿದರೆ ಅದಕ್ಕೆ ತಯಾರು ಮಾಡಿಕೊಂಡು ಬರುತ್ತಾರೆ. You are a young man. Come prepared

ಶ್ರೀ ಬಿ. ಸುರೇಶ್ ಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಸಚಿವರು ಅವರು ಸಚಿವರಾದ ಮೇಲೆ ಎಷ್ಟು ಮೊರಾರ್ಜಿ ಶಾಲೆ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗಳ ಕಟ್ಟಡಕ್ಕೆ ಟೆಂಡರ್ ಕರೆದಿದ್ದಾರೆ ಕೇಳಿ. ಇಲ್ಲಿಯವರೆಗೆ ಈ ಸರ್ಕಾರ ಬಂದಾಗಿನಿಂದ ಒಂದು ಮೊರಾರ್ಜಿ ಶಾಲೆ ಕೊಟ್ಟಿಲ್ಲ.

ಅಧ್ಯಕ್ಷರು: ಈ ತರಹದ ಪ್ರಶ್ನೆ ಕೇಳುವುದು, ಚರ್ಚೆಗೆ ಅವಕಾಶವಿಲ್ಲ. ನೀವೆಲ್ಲ ಸೀನಿಯರ್ ಮೆಂಬರ್ ಇದ್ದೀರಿ. ಎಷ್ಟು ಟೆಂಡರ್ ಕರೆದಿದ್ದಾರೆ ಏನು ಅಷ್ಟೇ ಕೇಳುವುದು. ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳಿ.

ಶ್ರೀ ಬಿ. ಸುರೇಶ್ ಗೌಡ: ದಲಿತರ ಬಗ್ಗೆ ನೀವು ಬಹಳ ಒಳ್ಳೆಯ ಭಾಷಣ ಮಾಡಿದಿರಿ.

ಅಧ್ಯಕ್ಷರು: ಆತರಹ ಎಲ್ಲ ಮಾತನಾಡಬೇಡಿ ನೀವು ಪ್ರಶ್ನೆ ಕೇಳಿ.

ಶ್ರೀ ಹೆಚ್. ಆಂಜನೇಯ: ನಿಮ್ಮ ಕಾಲದಲ್ಲಿ ನೂರಾರು ಶಾಲೆಗಳನ್ನು ದನ ಕಟ್ಟುವ ಕೊಠಡಿಗಳನ್ನು ಆರಂಭ ಮಾಡಿ ಹೋಗಿದ್ದೀರಿ. ಅವಕ್ಕೆಲ್ಲಾ ಎಲ್ಲೆಲ್ಲಿ ಸ್ವಂತ ಕಟ್ಟಡ ಸಿಗುತ್ತದೆ ಎಲ್ಲ ಕಡೆ ಜಾಗವನ್ನು ಪಡೆದು ಟೆಂಡರ್ ಕರೆಯುವಂತಹ ಪ್ರಕ್ರಿಯೆಗೆ ಈಗಾಗಲೇ ನಾವು ಚಾಲನೆಯನ್ನು ನೀಡಿದ್ದೇವೆ.

ಅಧ್ಯಕ್ಷರು: ಎಷ್ಟು ಟೆಂಡರ್ ಕರೆದಿದ್ದೀರಿ ಎಂದು ಅಷ್ಟೇ ಕೇಳಿದ್ದಾರೆ. ವಿಷಯ ಇದ್ದರೆ ಹೇಳಿ ಇಲ್ಲದಿದ್ದರೆ ಆ ಮೇಲೆ ಒದಗಿಸಿ ಕೊಡುತ್ತೇನೆಂದು ಹೇಳಿ.

ಶ್ರೀ ಹೆಚ್. ಆಂಜನೇಯ: ಎಷ್ಟು ಟೆಂಡರ್ ಕರೆದಿದ್ದೇವೆಂದು ಮಾಹಿತಿ ಒದಗಿಸಿ ಕೊಡುತ್ತೇನೆ.

ಶ್ರೀ ಬಿ. ಸುರೇಶ್‌ಗೌಡ: ಒಂದೂ ಟೆಂಡರ್ ಕರೆದಿಲ್ಲ. ಇವರು ಬಂದಾಗಿನಿಂದ ಒಂದೂ ಮೊರಾರ್ಜಿ ಶಾಲೆಗೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಗೆ ಟೆಂಡರ್ ಕರೆದಿಲ್ಲ.

ಅಧ್ಯಕ್ಷರು: ಕರೆದಿದ್ದರೆ ಹೇಳುತ್ತಾರೆ.

ಶ್ರೀ ಕೆ. ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಹಿಂದುಳಿದ ಪ್ರದೇಶಗಳಾಗಿರತಕ್ಕಂತಹ ಉತ್ತರ ಕರ್ನಾಟಕ ಹೈದರಾಬಾದ್ ಕರ್ನಾಟಕ ಮತ್ತು ಗುಳೆ ಹೋಗತಕ್ಕಂತಹ ಪ್ರದೇಶ ಏನಿದೆ, ಅಲ್ಲಿ identify ಮಾಡಿ ಅಲ್ಲಿ ವಿದ್ಯಾರ್ಥಿಗಳು ವಿಶೇಷವಾಗಿ ಹೆಣ್ಣು ಮಕ್ಕಳು ಶಾಲೆಗಳಿಂದ ಹಾಗೂ ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದಾರೆ. ಅವರಿಗೆ ಖಾಸಗಿ ಹಾಸ್ಟೆಲ್‌ಗಳನ್ನು ತೆಗೆಯುವುದರ ಮೂಲಕ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದಕ್ಕೆ participatory ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಏನಾದರೂ ಚಿಂತನೆ ಮಾಡುತ್ತಾ ಎನ್ನುವುದು ಒಂದು. ಕಾಲೋನಿಗಳಲ್ಲಿ, ಹಟ್ಟಿಗಳಲ್ಲಿ ಹಾಗೂ ಆಡಿಗಳಲ್ಲಿ ತಾವೇನಾದರೂ ಸ್ಥಾಪನೆ ಮಾಡುತ್ತೀರಾ?

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ ಅವರು ಗುಳೆ ಹೋಗತಕ್ಕಂತಹ ಮಕ್ಕಳಿಗೆ ಅನುಕೂಲ ಆಗುವುದಕ್ಕೋಸ್ಕರ ಶಾಲೆಗಳನ್ನು ತೆರೆಯುವುದಕ್ಕೆ ಖಾಸಗಿಯವರಿಗೆ ಕೊಡಿ ಎಂದು ಕೇಳುತ್ತಿದ್ದಾರೆ. ಖಾಸಗಿಯವರಿಗೆ ಕೊಡುವಂತಹ ಪ್ರಕ್ರಿಯೆ ಆಗಲೀ, ಪ್ರಸ್ತಾವನೆಯಾಗಲಿ ಇಲ್ಲ.

ಶ್ರೀ. ಕೆ. ಶಿವಮೂರ್ತಿ: ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಖಾಸಗಿ ಮಂಡಳಿಗಳಿಗೆ ಕೊಡಿ. SC/ST private organization ಇವೆಯಲ್ಲ Scheduled Caste Scheduled Tribe, backward class ಸಂಸ್ಥೆಗಳಿವೆಯಲ್ಲ ಅವರಿಗೆ ಕೊಡಿ.

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ಅವರು ಸಮಾಜ ಕಲ್ಯಾಣ ಇಲಾಖೆಯ ಸಚಿವರಾಗಿ ಕೆಲಸ ಮಾಡಿದ್ದಾರೆ.

ಖಾಸಗಿಯವರು ಯಾರ್ಯಾರು ಚೆನ್ನಾಗಿ ನಡೆಸುತ್ತೇವೆಂದು ಹೇಳುತ್ತಾರೆ ಅವರಿಗೆ ಕೊಡುತ್ತೇವೆ.

ಅಧ್ಯಕ್ಷರು: ಮಕ್ಕಳು ಬೇರೆ ಕಡೆ ಹೋಗುತ್ತಿದ್ದಾರೆ, ಅವರಿಗೆ ವಿದ್ಯಾರ್ಥಿ ನಿಲಯ ಸ್ಥಾಪನೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ. ಪರಿಶೀಲನೆ ಮಾಡುತ್ತೇನೆಂದು ಹೇಳಿ.

ಡಾ॥ ಕೆ. ಸುಧಾಕರ್: ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಅಂಘಟ್ಟಿಯಲ್ಲಿ ವಸತಿ ಶಾಲೆ ಮಂಜೂರಾಗಿ ಕಾಮಗಾರಿ ಪ್ರಾರಂಭವಾಗಿಲ್ಲ. ಸ್ಥಳವನ್ನು ನೀಡಿದ್ದೇವೆ ಹಣ ಕೂಡ ಮಂಜೂರಾಗಿದೆ. ಆದರೆ ಕಾಮಗಾರಿ ಮಾತ್ರ ಪ್ರಾರಂಭವಾಗಿಲ್ಲ. ಇದರ ಬಗ್ಗೆ ತಾವು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದು ಬಹಳ ಮುಖ್ಯ ಇದೆ.

ಅಧ್ಯಕ್ಷರು: ಇದನ್ನು ಕೇಳುವುದಕ್ಕೆ ನೀವು ಹೊರಟ್ಟಿದ್ದಿರಿ. ಕೇಳುವ ಹೊತ್ತಿನಲ್ಲಿ ಇಡೀ ದೇಶದ ಬಗ್ಗೆ ಕೇಳಿದಿರಿ.

ಶ್ರೀ ಹೆಚ್. ಆಂಜನೇಯ: ಜಾಗ ಕೊಟ್ಟು ಟೆಂಡರ್ ಕರೆದು ಕಾರ್ಯ ಪ್ರಾರಂಭ ಮಾಡಬೇಕು. ಫೈಲ್ ತರಿಸಿ ಅತಿ ಶೀಘ್ರದಲ್ಲಿಯೇ ಕಾಮಗಾರಿಯನ್ನು ಪ್ರಾರಂಭಿಸುತ್ತೇವೆ.

ಸಾರಿಗೆ ಸಂಸ್ಥೆಯ ವಾಹನ ಚಾಲಕರು

102 (971); ಶ್ರೀ ಚೆಲುವರಾಯ ಸ್ವಾಮಿ. ಎನ್ (ನಾಗಮಂಗಲ)

ಅ) ಕಳೆದ ಒಂದು ವರ್ಷದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ, ಆತ್ಮಹತ್ಯೆ ಪ್ರಯತ್ನ ಮಾಡಿದ, ಅಧಿಕಾರಿಗಳೊಡನೆ ವಾಗ್ವಾದ ನಡೆಸಿ/ ಜಗಳ ಮಾಡಿದ ವಾಹನ ಚಾಲಕರು, ನಿರ್ವಾಹಕರು ಹಾಗೂ ಇತರೆ ಸಿಬ್ಬಂದಿ ಸಂಖ್ಯೆ ಎಷ್ಟು (ಪ್ರತಿಯೊಂದು ಪ್ರಕರಣದ ವಿವರ ನೀಡುವುದು);